ಕವನ ಚಿತ್ರಪಟ

೨

# ಅಜ್ಜನ ಊರಲ್ಲಿ...


ಲೇಖಕರು: ಸಿಸು ಸಂಗಮೇಶ

ಆಕರ: ಸಿಸು ಸಂಗಮೇಶ ಆಯ್ದ ಮಕ್ಕಳ ಸಾಹಿತ್ಯ

ಸಂಪಾದಕರು: ಪ್ರೊ. ಸಿದ್ದಣ್ಣ ಬಿ. ಉತ್ನಾಳ



ಪ್ರಕಾಶನ: ಕನ್ನಡ ಪುಸ್ತಕ ಪ್ರಾಧಿಕಾರ



ಚಿತ್ರಗಳು: ಮಲ್ಲಪ್ಪ ಅ. ನಾಟಿಕಾರ, ವಿಜಯಪುರ






ನವೆಂಬರ್ – ಡಿಸೆಂಬರ್ ೨೦೨೪–೨೫

ಆರಂಭ ಯೋಜನೆ

Arambha 2024-25 Project
is Supported by Many
Individual Donors

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ

Dhwani Educational Resource Centre



ಮನೆಯ ಕುಂಬಿ ಮೇಲೆ ಕುಳಿತು
ಹಾಡುತಿಹವು ಹಕ್ಕಿ
ತಿಪ್ಪೆ ಕೆದರಿ ಕೋಳಿ ಮರಿಗೆ
ಕೊಡುವುದು ಅನ್ನ ಹೆಕ್ಕಿ!


ಹೊರಗೆ ಕುಳಿತು ಅಜ್ಜಿ ಹಸನು
ಮಾಡುತಿಹಳು ಅಕ್ಕಿ
ಒಳಗೆ ಬೆಕ್ಕು ಹಾಡುತಿಹುದು
ಹಾಲು–ಕೆನೆಯ ನೆಕ್ಕಿ!


ಪಕ್ಕದಲ್ಲಿ ಪ್ರೀತಿಯಿಂದ
ಕರೆಯುತಿಹುದು ಹಸುವು
‘ಹಾಲು ಕೊಡುವೆ ಕುಡಿದು ನೀನು
ಗಳಿಸು ತುಂಬ ಕಸುವು’



ಅತ್ತ–ಇತ್ತ–ಸುತ್ತು ಹಾಕಿ
ಮನೆಯ ಕಾಯ್ವ ಮೋತಿ
ಎಮ್ಮೆ, ಎತ್ತು, ಮೇಕೆ ಮರಿಗೆ
ಇಲ್ಲ ಯಾವ ಭೀತಿ!



ಊರ ಸುತ್ತ ಜೋಳ, ಗೋಧಿ
ತೋಟಪಟ್ಟಿ ಹಸಿರು
ಕಾರಖಾನೆ ಇಲ್ಲ, ಹೊಗೆಯು
ಕಟ್ಟುವುದಿಲ್ಲ ಉಸಿರು!


ಕಾರು–ಬಸ್ಸು, ಮೈಕು, ಕೇಕೆ
ಸದ್ದು–ಗದ್ದಲಿಲ್ಲ
ಮರದ ತಂಪು ನೆರಳಿನಲ್ಲಿ
ನಿದ್ದೆ ಬರುವದಲ್ಲ!




‘ಧ್ವನಿ’ ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.

ಶಿಕ್ಷಕರಲ್ಲಿ ನಿವೇದನೆ:

ಈ ವಿಶಿಷ್ಟ ಚಿತ್ರಪಟವನ್ನು ಮಕ್ಕಳಿಗೆ ತೋರಿಸುತ್ತಾ ಕವನವನ್ನು ಒಮ್ಮೆ ಓದಿ ಹೇಳಿ. ನಂತರ ಮಕ್ಕಳೇ ಸ್ವತಃ ವಾಚಿಸಲು ಮತ್ತು ರಾಗವಾಗಿ ಹಾಡಲು ಪ್ರೋತ್ಸಾಹಿಸಿ. ಅನಂತರ ಅವರದೇ ಆದ ರೀತಿಯಲ್ಲಿ ಸಂಭಾಷಣೆ ನಡೆಸಲು, ಕಿರು ರೂಪಕ ಮಾಡಲು ಪ್ರೇರೆಪಿಸಿ.

ಸಂಪರ್ಕ ಮಾಹಿತಿ
ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# 76,‘ಪುಷ್ಪಾಂಜಲಿ’ 3ನೇ ಅಡ್ಡರಸ್ತೆ, ಶಿವಗಿರಿ,
ಧಾರವಾಡ–580007, ಮೊ. 998 666 1055
dhwanitrust@gmail.com / www.dhwanitrust.org